CS (Main) Exam, 2021

HXS-U-KND

# ಕನ್ನಡ / KANNADA

## ಪತ್ರಿಕೆ I / Paper I

## (ಸಾಹಿತ್ಯ) / ( LITERATURE )

ವೇಳೆ: **ಮೂರು** ಗಂಟೆ
*Time Allowed : **Three** Hours*

ಗರಿಷ್ಠ ಅಂಕಗಳು : **250**
*Maximum Marks : **250***

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

*The number of marks carried by a question / part is indicated against it.*

*Answers must be written in **KANNADA (Kannada script)**.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

## SECTION A

**Q1.** **ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೆ 10 ಅಂಕಗಳು.** *10×5=50*

(a) ದ್ರಾವಿಡ ಭಾಷೆಗಳ ಸ್ವರೂಪ ಲಕ್ಷಣಗಳು *10*

(b) ಪಂಪನ ಕಾವ್ಯ ಮಾರ್ಗ ಮತ್ತು ಪ್ರಭಾವ *10*

(c) ವಚನ ಸಾಹಿತ್ಯದಲ್ಲಿ ಜೀವನಮೌಲ್ಯಗಳು *10*

(d) ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ನೀತಿ *10*

(e) ಕನ್ನಡ ನವೋದಯ ಕಾವ್ಯದಲ್ಲಿ ರಾಷ್ಟ್ರೀಯತೆ *10*

**Q2.** (a) ಕನ್ನಡ ಭಾಷೆಯ ಪ್ರಾಚೀನತೆಯ ವಿವಿಧ ಆಕರಗಳನ್ನು ವಿವರಿಸಿರಿ. *15*

(b) ನಾಗಚಂದ್ರನ ಪಂಪರಾಮಾಯಣದ ರಾವಣ ದುರಂತನಾಯಕನೆ ಹೇಗೆ ? ಚರ್ಚಿಸಿರಿ. *15*

(c) ಹರಿಹರನ ರಗಳೆಗಳಲ್ಲಿ ಬಂಡಾಯದ ಧ್ವನಿಗಳನ್ನು ವಿವೇಚಿಸಿರಿ. *10*

(d) ಕನ್ನಡದಲ್ಲಿ ನವ್ಯಕಾವ್ಯದ ಪರಂಪರೆ ಮತ್ತು ಪ್ರಯೋಗದ ವಿಧಾನಗಳನ್ನು ಕುರಿತು ವಿವೇಚಿಸಿರಿ. *10*

**Q3.** (a) ಕನ್ನಡ ಭಾಷೆಯ ಬೆಳವಣಿಗೆಯ ವಿವಿಧ ಅವಸ್ಥೆಗಳನ್ನು ಉದಾಹರಣೆಗಳೊಂದಿಗೆ ವಿವರಿಸಿರಿ. *15*

(b) ಜನ್ನನ ಯಶೋಧರಚರಿತೆ ಮತ್ತು ಅನಂತನಾಥ ಪುರಾಣಗಳನ್ನು ತೌಲನಿಕವಾಗಿ ಸಮೀಕ್ಷಿಸಿರಿ. *15*

(c) ರಾಘವಾಂಕನ ಹರಿಶ್ಚಂದ್ರಕಾವ್ಯದ ಚಂದ್ರಮತಿ ಪ್ರಲಾಪ ಪ್ರಸಂಗವನ್ನು ವಿವೇಚಿಸಿರಿ. *10*

(d) ಪ್ರಗತಿಶೀಲ ಸಾಹಿತ್ಯದ ತಾತ್ವಿಕ ನೆಲೆಗಳು ಕಥೆಕಾದಂಬರಿಗಳಲ್ಲಿ ಹೇಗೆ ಪ್ರಕಟವಾಗಿವೆ ? ವಿವರಿಸಿರಿ. *10*

**Q4.** (a) ಕನ್ನಡ ಭಾಷೆಯಲ್ಲಿ ಸ್ವೀಕರಣದ ವಿಧಿವಿಧಾನಗಳನ್ನು ಉದಾಹರಣೆಗಳೊಂದಿಗೆ ವಿವರಿಸಿರಿ. *15*

(b) ದಲಿತ ಬಂಡಾಯ ಸಾಹಿತ್ಯದ ಮೇಲೆ ವಿಚಾರವಾದಗಳ ಪ್ರಭಾವವನ್ನು ವಿವೇಚಿಸಿರಿ. *15*

(c) ಪಂಪಭಾರತ ಮತ್ತು ಕುಮಾರವ್ಯಾಸಭಾರತಗಳು ವಸ್ತುನಿರ್ವಹಣೆ, ಪಾತ್ರದರ್ಶನಗಳಲ್ಲಿ ಹೇಗೆ ಭಿನ್ನವಾಗಿವೆ ? ವಿವರಿಸಿರಿ. *10*

(d) ವಚನ ಮತ್ತು ದಾಸಸಾಹಿತ್ಯದ ಸಾಮಾನ್ಯ ಸ್ವರೂಪವನ್ನು ತೌಲನಿಕವಾಗಿ ವಿಮರ್ಶಿಸಿರಿ. *10*

## SECTION B

**Q5.** **ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೆ 10 ಅಂಕಗಳು.** *10×5=50*

(a) ಕನ್ನಡದಲ್ಲಿ ಸಾಹಿತ್ಯವಿಮರ್ಶೆ *10*

(b) ಕರ್ನಾಟಕದಲ್ಲಿ ಶಿವದೇವಾಲಯಗಳು *10*

(c) ವಿಜಯನಗರ ಕಾಲದ ವಾಸ್ತುಶಿಲ್ಪ *10*

(d) ಕನ್ನಡ ನಾಡಿನ ಜನಪದ ಕಲೆಗಳು *10*

(e) ಭಾರತೀಯ ಸಂಸ್ಕೃತಿಗೆ ಕರ್ನಾಟಕ ಸಂಸ್ಕೃತಿಯ ಕೊಡುಗೆ *10*

**Q6.** (a) ಕಾವ್ಯದಲ್ಲಿ ಧ್ವನಿ ಸಿದ್ಧಾಂತ ಮತ್ತು ಧ್ವನಿ ಪ್ರಭೇದಗಳನ್ನು ಉದಾಹರಣೆಗಳೊಂದಿಗೆ ವಿವೇಚಿಸಿರಿ. *15*

(b) ಬಾದಾಮಿ ಚಾಲುಕ್ಯರ ಶಿಲ್ಪಕಲೆಯನ್ನು ವಾಸ್ತುಶಿಲ್ಪದ ಹಿನ್ನೆಲೆಯಲ್ಲಿ ವಿವೇಚಿಸಿರಿ. *15*

(c) ಕರ್ನಾಟಕದ ಜೈನಧರ್ಮದ ಇತಿಹಾಸವೆಂದರೆ 'ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೇ ಆಗಿದೆ' – ಚರ್ಚಿಸಿರಿ. *10*

(d) ಕನ್ನಡದಲ್ಲಿ ಮಾರ್ಕ್ಸವಾದಿ ವಿಮರ್ಶೆಯ ವಿಕಾಸವನ್ನು ಕುರಿತು ವಿವೇಚಿಸಿರಿ. *10*

**Q7.** (a) ಔಚಿತ್ಯ ಸಿದ್ಧಾಂತದ ವಿವೇಚನೆಯನ್ನು ಉದಾಹರಣೆಗಳೊಂದಿಗೆ ವಿವರಿಸಿರಿ. *15*

(b) 'ಸಮಾಜೋ ಧಾರ್ಮಿಕ ಪರಿವರ್ತನೆಯೇ ಬಸವಣ್ಣನವರ ಶರಣಧರ್ಮದ ಪ್ರಧಾನ ಆಶಯ' – ಚರ್ಚಿಸಿರಿ. *15*

(c) ಕನ್ನಡ ಮಹಿಳಾಕಾವ್ಯದಲ್ಲಿ ಸ್ತ್ರೀವಾದಿ ನೆಲೆಗಳ ಸ್ವರೂಪವನ್ನು ಚರ್ಚಿಸಿರಿ. *10*

(d) ನವೋದಯ ಕವಿಗಳು ಕನ್ನಡ ನಾಡಿನ ಏಕೀಕರಣಕ್ಕೆ ಹೇಗೆ ಸ್ಪಂದಿಸಿದ್ದಾರೆ ? ವಿವೇಚಿಸಿರಿ. *10*

**Q8.** (a) ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ವಿವಿಧ ರಾಜಮನೆತನಗಳ ಕೊಡುಗೆಯನ್ನು ವಿವೇಚಿಸಿರಿ. *15*

(b) ಕರ್ನಾಟಕದಲ್ಲಿ ಶ್ರೀವೈಷ್ಣವಧರ್ಮ ಕಲೆ, ಸಂಸ್ಕೃತಿಗೆ ಕೊಟ್ಟ ಕೊಡುಗೆಯನ್ನು ಸಮೀಕ್ಷಿಸಿರಿ. *15*

(c) ಕರ್ನಾಟಕ ಸಂಗೀತ, ಕೀರ್ತನೆಗಳಲ್ಲಿ ಅಂತರ್‌ವಾಹಿನಿಯಾಗಿ ಹರಿದು ಬಂದ ಬಗೆಯನ್ನು ವಿವೇಚಿಸಿರಿ. *10*

(d) ದಲಿತ ಬಂಡಾಯ ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಚರ್ಚಿಸಿರಿ. *10*